

ಸಮುದ್ರ ಮಥನ




## ಒಮ್ಮೆ ಮಾತ್ರ ಬಾಲ್ಯ

‘ನಮ್ಮ ಮಕ್ಕಳಿಗೆ ಬಾಲ್ಯವಿದೆಯೇ?’, ನಡಹಳ್ಳಿ ವಸಂತ್ ಅವರ ಮುಖಪುಟ ಲೇಖನ (ಸುಧಾ, ನ.17) ಪ್ರಸ್ತುತ ಪರಿಸ್ಥಿತಿಗೆ ಅತ್ಯಂತ ಸೂಕ್ತವಾದ ಬರಹ. ಪೋಷಕರಿಗೆ ಎಚ್ಚರಿಕೆಯ ಗಂಟೆಯನ್ನೂ ಬಾರಿಸಿದೆ. ಮಕ್ಕಳನ್ನು ಸರ್ವಜ್ಞನನ್ನಾಗಿಸುವ ಹುಚ್ಚು ಹಂಬಲದಲ್ಲಿ ಅವರ ಬಾಲ್ಯವನ್ನು ಕಸಿದುಕೊಳ್ಳುವ ಹಕ್ಕು ಯಾವ ಪೋಷಕರಿಗೂ ಇಲ್ಲ. ಒಳಾಂಗಣ ಮತ್ತು ಹೊರಾಂಗಣ ಕ್ರೀಡೆಗಳಿಗೂ ಮಹತ್ವ ಕೊಡಬೇಕು. ಎಲ್ಲರಿಗೂ ಜೀವನದಲ್ಲಿ ಒಮ್ಮೆ ಮಾತ್ರ ಬಾಲ್ಯ ಲಭಿಸುವುದು. ಹೀಗಾಗಿ ಮಕ್ಕಳು ಮಕ್ಕಳಾಗಿ ಬೆಳೆಯಲು ಅನುವು ಮಾಡಿಕೊಡಬೇಕು.

—ಜಿ. ಸುಬ್ರಹ್ಮಣ್ಯ ಬೆಂಗಳೂರು, ಎಲ್.ಸುಮಂತ್ ಮಂಗನಹಳ್ಳಿ, ಮಹಾವೀರ ಕಾಸರ ಶಿವಮೊಗ್ಗ, ಪಿ. ಗೋವಿಂದರಾಜ್ ಶಿವಮೊಗ್ಗ

## ನಿತ್ಯ ಕಿಶೋರತೆ

‘ನಮ್ಮ ಮಕ್ಕಳಿಗೆ ಬಾಲ್ಯವಿದೆಯೇ?’ ಇಲ್ಲ. ದೊಡ್ಡವರಿಗೂ ಇಲ್ಲ! ಕುವೆಂಪು ಅವರ ಉಕ್ತಿ ಸ್ಮರಣೀಯ. ‘ದೊಡ್ಡವರೆಲ್ಲರ ಹೃದಯದಿ ಕಟ್ಟಿಹ ತೊಟ್ಟಿಲ ಲೋಕದಲಿ/ ನಿತ್ಯ ಕಿಶೋರತೆ ನಿದ್ರಿಸುತಿರುವುದು ವಿಸ್ಮೃತ ನಾಕದಲಿ!’ (ವಿಸ್ಮೃತ’ ಅಲ್ಲ ಮೃತ!)

— ಸಿಪಿಕೆ ಮೈಸೂರು

## ಉಪಯುಕ್ತ ಮಾಹಿತಿ

‘ಬದುಕು ಬದಲಿಸಬಲ್ಲ ಸಿ.ವಿ.’ (ನಿರಂಜನ ವಾನಳ್ಳಿ) ಲೇಖನ ಉಪಯುಕ್ತ ಮಾಹಿತಿ ನೀಡಿದೆ. ಉದ್ಯೋಗ ಅರಸುವವರಿಗೆ ಹಾಗೂ ಉದ್ಯೋಗ ದಾತರಿಗೆ ತಮ್ಮ ವ್ಯಕ್ತಿ ಪರಿಚಯವನ್ನು ಯಾವ ರೀತಿ ಬರೆಯಬೇಕು ಎಂಬ ಬಗ್ಗೆ ಉತ್ತಮ ಮಾರ್ಗದರ್ಶನ ನೀಡಿದಂತಿದೆ ಈ ಬರಹ.

—ಗಾಣಧಾಳು ರಾಮಣ್ಣ ಚಿತ್ರದುರ್ಗ

## ಛಲವಿದ್ದರೆ ಹಲವು ದಾರಿ

‘ಸಾಧಿಸುವ ಛಲವಿದ್ದರೆ ಮನೆಯಲ್ಲಿದ್ದರೇನಂತೆ?’ (ಸವಿತಾ ಶಾಂತಪ್ರಿಯ) ಮಹಿಳೆಯರ ಕಣ್ಣು ತೆರೆಸುವಂತಿದೆ. ಮಕ್ಕಳು ಹುಟ್ಟಿದ ನಂತರ ಮಹಿಳೆ ಹೊರಗೆ ಹೋಗಿ ದುಡಿಯುವುದು ಸ್ವಲ್ಪ ಕಷ್ಟವೇ. ಮಕ್ಕಳು ದೊಡ್ಡವರಾಗಿ ಶಾಲೆಗೆ ಹೋಗುವಂತಾದರೆ ತಮ್ಮ ಮಕ್ಕಳ ಓರಿಗೆಯವರಿಗೆ ಮನೆ ಪಾಠ ಹೇಳಿಕೊಡುವುದನ್ನು ಮಾಡಬಹುದು. ತಮ್ಮ ಮಕ್ಕಳ ಓದಿನ ಮೇಲೂ ನಿಗಾ ಇಡಬಹುದು. ಬಿಡುವಿನ ಸಮಯದಲ್ಲಿ ಹಣ ಸಂಪಾದಿಸುವ ಯಾವುದಾದರೂ ಉದ್ಯೋಗ ಮನೆಯಿಂದಲೇ ಮಾಡಬಹುದು. ಒಟ್ಟಿನಲ್ಲಿ ಛಲವಿದ್ದರೆ ಬದುಕಿನ ಪಯಣದಲ್ಲಿ ಹಣ ಗಳಿಕೆಗೆ ಹತ್ತು ಹಲವು ದಾರಿಗಳಿವೆ.

—ಮಧುರಾ ಸುಬ್ರಹ್ಮಣ್ಯ ಬೆಂಗಳೂರು

## ಪ್ರವಾಸ ಲೇಖನ

‘ಎಡಕಲ್ಲು ಗುಹೆಗಳು’ (ವಾರಿಜಾ ಜಗದೀಶ್) ಪ್ರವಾಸ ಲೇಖನ ಓದಿದಾಗ ಮನಸ್ಸು ಹಗುರವಾಯಿತು. ಭಾರತಿ ಸುತ ಅವರ ‘ಎಡಕಲ್ಲು ಗುಡ್ಡದ ಮೇಲೆ’ ಕಾದಂಬರಿ ‘ಸುಧಾ’ದಲ್ಲಿ ಓದಿದ್ದು, ಅದೇ ಸಿನಿಮಾ ಆಗಿದ್ದು ಎಲ್ಲವೂ ನೆನಪಾದವು.

—ಸವಿತಾ ರಾಧಾಕೃಷ್ಣ ರಿಪ್ಪನ್‌ಪೇಟೆ, ಮುಕುಂದ ಹೆರಕಲ್ಲ ಕಲಬುರಗಿ

## ‘ನೀವು ಕೇಳಿದಿರಿ’ ಸೂಪರ್

ಒಂದು ಪುಟದ ‘ನೀವು ಕೇಳಿದಿರಿ’ ಅಂಕಣ ನಿಜಕ್ಕೂ ಸೂಪರ್. ಪ್ರತಿ ವಾರವೂ ಸೂಜಿಗಲ್ಲಿನಂತೆ ಸೆಳೆಯುವ ಈ ಬರಹ ಅದ್ಭುತ. ಓದುಗರ ಪ್ರಶ್ನೆಗಳಿಗೆ ಅಷ್ಟೇ ಮಾರ್ಮಿಕ, ಪ್ರಾಸಬದ್ಧ ಉತ್ತರ ನೀಡುವ ರಾಮ್ ಹಾಗೂ ಇದಕ್ಕೆ ಪೂರಕವಾದ ಚಿತ್ರಗಳು ಗಮನಸೆಳೆದವು.

—ಕಾಳಿಹುಂಡಿ ಶಿವಕುಮಾರ್ ಮೈಸೂರು



